**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.66/2023

ಸಾಕ್ಷಿಯನ್ನು ದಿಃ **02.07.2026** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ 3ನೇ ಪ್ರತಿವಾದಿ ಪರ ಶ್ರೀ. MEM ವಕೀಲರಿಂದ**

ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ 1/4 ಭಾಗ ಬರಬೇಕೆಂದು ದಾವೆ ಹಾಕಿದ್ದೇನೆ. ಈದಾವೆಯನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನನಗೆ 1980ರಲ್ಲಿ ಮದುವೆಯಾಗಿದೆ. ನಿಖರವಾದ ತಾರೀಖು ಗೊತ್ತಿಲ್ಲ. ನನ್ನ ಮದುವೆಯ ಸಮಯದಲ್ಲಿ ನನ್ನ ತಂದೆಯಾದ 1ನೇ ಪ್ರತಿವಾದಿ ಮತ್ತು ಸಹೋದರನಾದ 3ನೇ ಪ್ರತಿವಾದಿ ಇದ್ದರು. ನಾನು ಈ ದಾವೆ ಸಲಿಲಸುವ ಕಾಲಕ್ಕೆ ಏನೆಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ತಿಳಿದುಕೊಂಡಿದ್ದೇನೆ. ನಮ್ಮ ಕುಟುಂಬದ ವಂಶವೃಕ್ಷ ಮತ್ತು ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ವಂಶವೃಕ್ಷವನ್ನು ತಹಶಿಲ್ದಾರ್ ರವರಿಂದ ಪಡೆದುಕೊಳ್ಳಬೇಕು ಎಂದರೆ ಸರಿ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. ಯಾವ ದಾಖಲೆ ಹಾಜರುಪಡಿಸಿದ್ದಿರಿ ಎಂದರೆ ದಾಖಲೆಯ ಬಗ್ಗೆ ಹೇಳಲಾಗುವುದಿಲ್ಲ. ಎಲ್ಲಾ ದಾಖಲೆ ಕೊಟ್ಟಿದ್ದೇನೆ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ವಕೀಲರಿಗೆ ಕೊಟ್ಟಿದ್ದೇನೆ. 1ನೇ ಪ್ರತಿವಾದಿ ಮತ್ತು ಅವರ ಸಹೋದರರ ಮಧ್ಯೆ ವಿಭಾಗ ಆಗಿದೆ ಎಂದು ವಾದಪತ್ರದಲ್ಲಿ ನಾನು ಹೇಳಿದ್ದು, ಆ ಬಗ್ಗೆ ವಿಭಾಗ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ನಾನು ಯಾವುದೇ ವಿಭಾಗ ಪತ್ರವನ್ನು ಹಾಜರುಪಡಿಸದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಸರ್ವೇ ನಂಬರ್ 142/1. ಸದರಿ ದಾವಾ ಸ್ವತ್ತು 1980-81ನೇ ಸಾಲಿನಲ್ಲಿ ಎಂ.ಆರ್ ಆಗಿದೆ ಎಂದರೆ ಸರಿ. ಎಂ.ಆರ್ ಆಗಿ ಸುಮಾರು 46 ವರ್ಷವಾಗಿದೆ ಎಂದರೆ ಸರಿ. ನನ್ನ ಮದುವೆಯ ಸಮಯದಲ್ಲಿ ನನ್ನ ತಂದೆ ವರದಕ್ಷಿಣೆ ವರೋಪಚಾರ ಕೊಟ್ಟಿದ್ದಾರೆ ಎಂದರೆ ಇಲ್ಲ. ನನ್ನ ತಂದೆ ಬದುಕಿದ್ದಾಗ ನನ್ನ ತಾಯಿಯನ್ನು 2ನೇ

ಪ್ರತಿವಾದಿಯಾಗಿ ಮಾಡುವ ಅವಶ್ಯತಕೆ ಇರಲಿಲ್ಲ ಎಂದರೆ ನನ್ನ ತಂದೆ ಬದುಕಿದ್ದಾಗಲೇ ದಾವೆ ಹಾಕಿದ್ದಃನೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ವಾದಪತ್ರದಲ್ಲಿ ಹೇಳಿರುವ ದಿಃ 13.09.2021ರ ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಹಾಜರುಪಡಿಸಿದ್ದೇನೆ. ಏನು ಅಭಿವೃದ್ಧಿ ಮಾಡುತ್ತಿದ್ದಾರೆ ಎಂದರೆ ಸೈಟ್ ನಿರ್ಮಿಸುತ್ತಿದ್ದಾರೆ. ಈ ದಾವೆಯಲ್ಲಿ ನಾನು ಯಾವುದೇ ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಿಃ 13.09.2021 ರಂದು ಯಾವುದೇ ಜಂಟಿ ಅಭಿವೃದ್ಧಿ ಕರಾರು ಪತ್ರ ಆಗಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ RTC ಮತ್ತು MR ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ವಂಶವೃಕ್ಷ ಕೊಟ್ಟಿದ್ದೇನೆ. ಈ ದಾವೆ ದಾಖಲಿಸುವ ಮೊದಲು ಪ್ರತಿವಾದಿಯರಿಗೆ ನೋಟೀಸ್ ಕೊಟ್ಟಿದ್ದೇನೆ. ಯಾವ ದಿನಾಂಕದಂದು ನೋಟೀಸ್ ಕೊಟ್ಟಿದ್ದೇನೆ ಎಂದು ನೆನಪಿಲ್ಲ. ದಾವೆ ದಾಖಲಿಸುವ ಮುಂಚಿತವಾಗಿ ಪ್ರತಿವಾದಿಯರಿಗೆ ನೋಟಿಸ್ ಕೊಟ್ಟಿಲ್ಲ ಎಂದರೆ ಕೊಟ್ಟಿದ್ದೇನೆ. ನೋಟಿಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ನೆನಪಿಲ್ಲ.

(**ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು**.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.